ವಿಜಯ ಕರ್ನಾಟಕ

### ಸಾಹಿತಿ ಚಂದ್ರಶೇಖರ ಕಂಬಾರ ಅಭಿಮತ

# ಭಾವಗೀತೆಗೆ ರಸಾನುಭವ ತುಂಬಿದ ಕೆಎಸ್‌ನ

■ **ವಿಕ ಸುದ್ದಿಲೋಕ** ಬೆಂಗಳೂರು

ಭಾವಗೀತೆಗಳಲ್ಲಿ ರಸಾನುಭವ ಹಾಗೂ ದಾಂಪತ್ಯ ಸಾಹಿತ್ಯದ ಭಾಷೆಗೆ ಹದವಾದ ಸೂಕ್ಷ್ಮತೆ ಕೊಟ್ಟ ಮೇರು ಕವಿ ಕೆಎಸ್‌ಎನ್ ಎಂದು ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಸಾಹಿತಿ ಚಂದ್ರಶೇಖರ ಕಂಬಾರ ಅಭಿಪ್ರಾಯಪಟ್ಟರು.

ಸಾಹಿತ್ಯ ಅಕಾಡೆಮಿ ಹಾಗೂ ಜೈನ್ ವಿಶ್ವವಿದ್ಯಾಲಯಗಳ ಸಹಯೋಗದೊಂದಿಗೆ ಜೆ ಸಿ ರಸ್ತೆಯ ಜೈನ್ ಕಾಲೇಜು ಆವರಣದಲ್ಲಿ ಪ್ರೇಮ ಕವಿ ಕೆ.ಎಸ್. ನರಸಿಂಹಸ್ವಾಮಿಯವರ ಜನ್ಮಶತಮಾನೋತ್ಸವದ ಅಂಗವಾಗಿ ಆಯೋಜಿಸಿದ್ದ ವಿಚಾರ ಸಂಕಿರಣ ಉದ್ಘಾಟಿಸಿ ಭಾನುವಾರ ಅವರು ಮಾತನಾಡಿದರು.

''ಕನ್ನಡ ಸಾಹಿತ್ಯದಲ್ಲಿ ಪದ್ಯ ಹಾಗೂ ಭಾವಗೀತೆಗಳಿಗೆ ಅದರದೇ ಆದ ಇತಿ-ಮಿತಿಗಳಿರುವುದರಿಂದ ಅವುಗಳಿಗೆ ಕಥನದ ರಸಾನುಭವ ಕಟ್ಟಿಕೊಡುವುದು ಕಷ್ಟ ಸಾಧ್ಯ ಎಂಬ ವಾದವಿದೆ. ಆದರೆ ಇದಕ್ಕೆ ತದ್ವಿರುದ್ಧವಾಗಿ ಕನ್ನಡ ಸಾಹಿತ್ಯ ಲೋಕದ ಮಟ್ಟಿಗೆ ಭಾವಗೀತೆಗಳಲ್ಲೂ ರಸಾನುಭವ ನೀಡುವ ಸಾಧ್ಯತೆಯನ್ನು ಕೆ.ಎಸ್. ನರಸಿಂಹಸ್ವಾಮಿಯವರು ತೋರಿಸಿಕೊಟ್ಟಿದ್ದಾರೆ. ಈ ಮೂಲಕ ಕನ್ನಡ ಸಾಹಿತ್ಯ ಲೋಕದಲ್ಲಿ ರತ್ನಾಕರವರ್ಣಿಯ ನಂತರ ಅತ್ಯಂತ ಪ್ರಭಾವಿಯಾಗಿ ಶೃಂಗಾರ ಕಾವ್ಯಗಳನ್ನು ರಚಿಸಿದವರು ಕವಿ ಕೆ.ಎಸ್. ನರಸಿಂಹಸ್ವಾಮಿ ಎಂದರೆ ತಪ್ಪಾಗದು. ದಾಂಪತ್ಯಗೀತೆಗಳಲ್ಲಿ ಅಶ್ಲೀಲವೂ ಅಲ್ಲದ ಹಾಗೂ ಹೆಚ್ಚು ಗಾಂಭೀರ್ಯವೂ ಅಲ್ಲದ ಸರಳ ಭಾಷೆಯ ಮೂಲಕ ಭಾವನಾ ಪ್ರಪಂಚವನ್ನೇ ತೋರಿಸುವ ಶಕ್ತಿ ಅವರ ಬರವಣಿಗೆಯಲ್ಲಿತ್ತು. ದಾಂಪತ್ಯ ಸಾಹಿತ್ಯದ ಭಾಷೆಗೆ ಹದವಾದ ಸೂಕ್ಷ್ಮತೆ ಕೊಟ್ಟ ಹೆಗ್ಗಳಿಕೆಯೂ ಕೆಎಸ್‌ಎನ್ ಅವರದ್ದು,'' ಎಂದು ನುಡಿದರು.




**ಸಾಹಿತ್ಯ ಅಕಾಡೆಮಿಯು ಜೈನ್ ಕಾಲೇಜು ಆವರಣದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಕೆಎಸ್‌ನ ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಲಾಯಿತು. ಇದೇ ವೇಳೆ ಚಂದ್ರಶೇಖರ ಕಂಬಾರ, ನರಹಳ್ಳಿ ಬಾಲಸುಬ್ರಹ್ಮಣ್ಯ, ಕಮಲಾ ಹಂಪನಾ, ಟಿ.ಎಸ್. ನಾಗಾಭರಣ ಮತ್ತಿತರರು ಉಪಸ್ಥಿತರಿದ್ದರು.**

''ಕೆಎಸ್‌ಎನ್ ಅವರ ಪ್ರತಿಯೊಂದು ಪದ್ಯದಲ್ಲೂ ಪ್ರಸ್ತುತಕ್ಕೆ ಪ್ರಿಯವಾದ ವಸ್ತುವನ್ನು ಆಯ್ಕೆ ಮಾಡಿಕೊಳ್ಳಲಾಗಿರುತ್ತದೆ. ಅಲ್ಲದೆ ಪದ್ಯದೊಳಗೆಯೇ ಆದಿ-ಅಂತ್ಯವಿರುವ ಕಥೆಯನ್ನು ರಸವತ್ತಾಗಿ ಹೇಳುವ ವಿಶಿಷ್ಟ ಶೈಲಿ ಅವರದ್ದಾಗಿದೆ. ಕನ್ನಡ ಭಾಷೆ ಹಾಗೂ ಸಂಸ್ಕೃತಿಯಲ್ಲಿ ಅವರ ಹೆಸರು ಎಲ್ಲಾ ಕಾಲಕ್ಕೂ ಚಿರಸ್ಥಾಯಿ,'' ಎಂದರು.

ಸಾಹಿತಿ ಡಾ. ಕಮಲಾ ಹಂಪನಾ ಮಾತನಾಡಿ ''ಕೆಎಸ್‌ನ ಅವರ ಪ್ರತಿಯೊಂದು ಭಾವಗೀತೆಯೂ ಒಂದು ಸಿನಿಮಾ ಆಗುವಷ್ಟರ ಮಟ್ಟಿನ ಕಥೆಯನ್ನು ಹೊಂದಿರುತ್ತದೆ. ಇವೆಲ್ಲವನ್ನೂ ಮೀರಿ ಅವರೊಬ್ಬ ಸರಳ ಸಜ್ಜನಿಕೆಯ ವ್ಯಕ್ತಿ,'' ಎಂದರು.

ಸಾಹಿತ್ಯ ಅಕಾಡೆಮಿ ಕನ್ನಡ ಸಲಹಾ ಸಮಿತಿಯ ಸಂಚಾಲಕ ನರಹಳ್ಳಿ ಬಾಲಸುಬ್ರಹ್ಮಣ್ಯ ಮತ್ತಿತರರು ಉಪಸ್ಥಿತರಿದ್ದರು.

ಉದ್ಘಾಟನೆ ನಂತರ 'ಕೆ. ಎಸ್‌ಎನ್ ವ್ಯಕ್ತಿತ್ವ ಮತ್ತು ಕೃತಿಗಳು' ಕುರಿತು ಹಾಗೂ 'ಕೆ ಎಸ್ ಎನ್ ಅವರ ಕವಿತೆಗಳ ಅನುವಾದಗಳ ವಾಚನ' ಕುರಿತು ವಿಚಾರಗೋಷ್ಠಿಗಳು ನಡೆದವು.

ಚಲನಚಿತ್ರ ನಿರ್ದೇಶಕ ಟಿ.ಎಸ್. ನಾಗಾಭರಣ, ಸಾಹಿತಿಗಳಾದ ಎಂ.ವಿ. ವೆಂಕಟೇಶ ಮೂರ್ತಿ, ಸಾಹಿತ್ಯ ಅಕಾಡೆಮಿಯ ಕಾರ್ಯದರ್ಶಿಗಳಾದ ಕೆ. ಶ್ರೀನಿವಾಸರಾವ್, ಜೈನ್ ವಿಶ್ವವಿದ್ಯಾಲಯದ ಪ್ರಾಂಶುಪಾಲರಾದ ಡಾ. ಶಾಂತಿ ಉಪಸ್ಥಿತರಿದ್ದರು.